## ನಮ್ಮಲ್ಲೇ ವಾಸಿ!

**ವೇಗವಾಗಿ ವಿಸ್ತರಿಸುತ್ತಿರುವ ಮಹಾನಗರ ಬೆಂಗಳೂರಿನಲ್ಲಿ ಪ್ರತಿ ದಿನ ಗಂಡ– ಹೆಂಡತಿ ಜಗಳಕ್ಕೆ ಸಂಬಂಧಿಸಿದ ಸುದ್ದಿಯೊಂದು ಇದ್ದೇ ಇರುತ್ತದೆ. ಕುಟುಂಬ ನ್ಯಾಯಾಲಯಗಳ ಮೂಲಗಳ ಪ್ರಕಾರ, ಬೆಂಗಳೂರಿನಲ್ಲಿ ಪ್ರತಿ ವರ್ಷ 3000– 3500 ರಷ್ಟು ವಿಚ್ಛೇದನಗಳು ನಡೆಯುತ್ತವೆ. ಉತ್ತರ ಕರ್ನಾಟಕದಲ್ಲಿ ದಾಂಪತ್ಯ ಜಗಳಗಳು ಸಾಮಾನ್ಯ. ಆದರೆ ವಿಚ್ಛೇದನಗಳು ಕಡಿಮೆ. ಬಹುತೇಕ ಪ್ರಕರಣಗಳಲ್ಲಿ ಹೆಂಡತಿ ಗಂಡನಿಂದ ಮಾಸಾಶನ ಅಥವಾ ಪರಿಹಾರ ಪಡೆಯುವುದಕ್ಕೆ ವ್ಯಾಜ್ಯಗಳು ನಡೆಯುತ್ತವೆ. ಒಟ್ಟಾರೆ ರಾಜ್ಯದಲ್ಲಿ ಪ್ರತಿ ವರ್ಷ 6000– 6500 ರಷ್ಟು ವಿಚ್ಛೇದನಗಳು ನಡೆಯುತ್ತವೆ. ಇತರ ರಾಜ್ಯಗಳಲ್ಲೂ ಹೆಚ್ಚು ಕಡಿಮೆ ಇಷ್ಟೇ ಅಂಕಿ ಅಂಶಗಳು ಸಿಗುತ್ತವೆ.**

**ಆದರೆ ವಿದೇಶಗಳಿಗೆ ಹೋಲಿಸಿದರೆ ನಮ್ಮ ಕುಟುಂಬ ವ್ಯವಸ್ಥೆ ಇನ್ನೂ ಬಲವಾಗಿದೆ. ಏಕೆಂದರೆ ಅಮೆರಿಕದಲ್ಲಿ ಡೈವೋರ್ಸ್ ಪ್ರಮಾಣ ಶೇಕಡಾ 45ರಷ್ಟು. ಬ್ರಿಟನ್ನಿನಲ್ಲಿ ಶೇಕಡಾ 50ರಷ್ಟು. ಆದರೆ ಭಾರತದಲ್ಲಿ ಮದುವೆಗಳ ಶೇಕಡಾ 4–5ರಷ್ಟು ಪ್ರಮಾಣದಲ್ಲಿ ಮಾತ್ರ ವಿಚ್ಛೇದನಗಳು ನಡೆಯುತ್ತವೆ.**

ಸಿದ್ಧತೆಯನ್ನು ಮಾಡಿಕೊಂಡರೂ ವೈವಾಹಿಕ ಜೀವನದ ಅಗತ್ಯಗಳು ಬೇರೆಯದೇ ಆಗಿರುವುದರಿಂದ ಮದುವೆಯಾದ ನಂತರ ಇತರ ದಂಪತಿಗಳಂತೆ ಭಿನ್ನಾಭಿಪ್ರಾಯಗಳನ್ನು ನಿಭಾಯಿಸಲಾಗದೆ ನಿರಾಸೆಗೊಳ್ಳಬಹುದು. ಇನ್ನೂ ಹಲವರ ಪ್ರೇಮ ಈ ಹಂತದಲ್ಲಿಯೇ ಭಿನ್ನಾಭಿಪ್ರಾಯಗಳ ಭಾರಕ್ಕೆ ಕುಸಿದುಬೀಳುತ್ತದೆ.

ಬಾಲ್ಯದ ಅನುಭವಗಳು, ಬೆಳೆದುಬಂದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ವಾತಾವರಣಗಳು ನಮ್ಮೆಲ್ಲರ ಜೀವನದ ಕನಸು ಕಲ್ಪನೆಗಳನ್ನು ರೂಪಿಸುವುದರಿಂದ ಎಲ್ಲರಲ್ಲಿ ಭಿನ್ನಭಿನ್ನ ಅಭಿಪ್ರಾಯಗಳು ಸಹಜ. ಆದ್ದರಿಂದ ವಿವಾಹಕ್ಕೆ ಸಿದ್ಧತೆ ನಡೆಸಿರುವ ಎಲ್ಲರೂ ಭಾವೀ ಜೀವನದ ರೂಪರೇಷೆಗಳನ್ನು ಒಳಗೊಂಡ ಒಂದು ಸೌಜನ್ಯದ ಕರಾರನ್ನು (ಜೆಂಟ್ಲ್‌ಮನ್ಸ್ ಮತ್ತು ಜೆಂಟ್ಲ್‌ವುಮನ್ಸ್ ಅಗ್ರೀಮೆಂಟ್!) ಮಾಡಿಕೊಳ್ಳಬೇಕು. ದಾಖಲೆಗಳು, ನೋಂದಣಿ, ಸಾಕ್ಷಿಗಳು ಇವೆಲ್ಲದರ ಅಗತ್ಯವಿರದ ಇಂತಹ ಒಪ್ಪಂದದಲ್ಲಿ ಇರಬಹುದಾದ ಅಂಶಗಳು ಯಾವುವು ಎಂದು ನೋಡೋಣ.

★ ಒಪ್ಪಂದದ ಅವಧಿ ಇಬ್ಬರ ಜೀವಮಾನವಿಡೀ ಆಗಿರುತ್ತದೆ ಮತ್ತು ಲಾಭನಷ್ಟಗಳು ಸಮನಾಗಿ ಹಂಚಿಕೆಯಾಗುತ್ತವೆ.

★ ವೈವಾಹಿಕ ಸಂಬಂಧಗಳ ಬಗೆಗೆ ತಮಗಿರುವ ಕನಸು ಕಲ್ಪನೆಗಳನ್ನು ಇಬ್ಬರೂ ಹಂಚಿಕೊಳ್ಳಬೇಕು. ಒಂದು ದೀರ್ಘಕಾಲದ ಸೌಹಾರ್ದಯುತ ಬದುಕಿಗೆ ತಾನು ಕೊಡಬಹುದಾದ ಕಾಣಿಕೆಗಳೇನು ಮತ್ತು ಸಂಗಾತಿಯಿಂದ ತನ್ನ ನಿರೀಕ್ಷೆಗಳೇನು ಎನ್ನುವುದರ ಪರಸ್ಪರ ತಿಳಿವಳಿಕೆ ದಾಂಪತ್ಯದ ಉತ್ತಮ ತಳಹದಿಗೆ ಸಹಾಯ ಮಾಡುತ್ತದೆ.

★ ತಾವು ನಂಬಿಕೊಂಡಿರುವ ಜೀವನ ಮೌಲ್ಯಗಳು, ಉದ್ಯೋಗ ಮತ್ತು ವೈಯುಕ್ತಿಕ ಜೀವನದಲ್ಲಿ ತಮ್ಮ ಗುರಿಗಳು, ಧಾರ್ಮಿಕ ಮತ್ತಿತರ ವಿಚಾರಗಳಲ್ಲಿ ತಮ್ಮ ನಂಬಿಕೆಗಳ ಪೂರ್ಣ ಪರಿಚಯವನ್ನು ಇಬ್ಬರೂ ಸಂಗಾತಿಗೆ ಮಾಡಿಸಬೇಕು.



★ ಹಣ ಗಳಿಸುವ, ಉಳಿಸುವ ಮತ್ತು ಬಳಸುವ ಬಗೆಗೆ ಸ್ಪಷ್ಟವಾದ ಕಲ್ಪನೆಗಳನ್ನು ಇಬ್ಬರೂ ಹೊಂದಿದ್ದರೆ ಸಾಕಷ್ಟು ಕಿರಿಕಿರಿಗಳನ್ನು ತಪ್ಪಿಸಬಹುದು. ಇಬ್ಬರೂ ದುಡಿಯುವವರಾಗಿದ್ದರೆ ಕುಟುಂಬಕ್ಕೆ ಸೇರಿದ ಹಣ ಮತ್ತು ವೈಯುಕ್ತಿಕ ಅಗತ್ಯಗಳಿಗಾಗಿ ಇಟ್ಟುಕೊಳ್ಳಬಹುದಾದ ಹಣಗಳ ಬಗೆಗೆ ಚರ್ಚೆ ಮಾಡಬೇಕು. ಪತ್ನಿ ಮನೆವಾರ್ತೆಯಲ್ಲಿ ತೊಡಗಿಕೊಳ್ಳುವವಳಾಗಿದ್ದರೆ ಪತಿಯ ಹಣಕಾಸಿನ ಸಂಪೂರ್ಣ ವಿವರಗಳನ್ನು ಪಡೆಯಲು ಅವಳಿಗೆ ಸ್ವಾತಂತ್ರ್ಯ ಇರಬೇಕು. ಅವಳ ವೈಯುಕ್ತಿಕ ಅಗತ್ಯಗಳಿಗೆ ಯಾವಾಗಲೂ ಪತಿಯ ಮುಂದೆ ಕೈಯೊಡ್ಡುವ ಅನಿವಾರ್ಯತೆಯನ್ನು ತಪ್ಪಿಸಬೇಕು.

★ ಪೋಷಕರನ್ನು ನೋಡಿಕೊಳ್ಳಬೇಕಾದ ಸಂದರ್ಭಗಳಲ್ಲಿ ಇಬ್ಬರಿಗೂ ಮತ್ತೊಬ್ಬರ ಜವಾಬ್ದಾರಿಗಳ ಅರಿವಿರಬೇಕು. ಇಂತಹ ಜವಾಬ್ದಾರಿಗಳನ್ನು ಇಬ್ಬರೂ ಸೇರಿ ಹೇಗೆ ನಿಭಾಯಿಸಬಹುದು ಎನ್ನುವುದರ ಬಗೆಗೆ ಒಮ್ಮತವನ್ನು ಸಾಧಿಸಲು ಪ್ರಯತ್ನಿಸಬಹುದು.

★ ಇಬ್ಬರೂ ಪರಸ್ಪರರಿಗಾಗಿ ಹಂಚಿಕೊಳ್ಳುವ ಸಮಯ ಮತ್ತು ಸ್ವಂತ ಕುಟುಂಬ ಹಾಗೂ ಅವರವರ ಸ್ನೇಹಿತರಿಗಾಗಿ ಮೀಸಲಿಡುವ ಸಮಯದ ಬಗೆಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಬೇಕು. ವೃತ್ತಿಯಲ್ಲದೆ ತಮಗಿರುವ ಹವ್ಯಾಸ ಮತ್ತು ಅದಕ್ಕಾಗಿ ತೊಡಗಿಸಬೇಕಾಗುವ ಸಮಯ ಹಣ ಮುಂತಾದವುಗಳನ್ನು ಚರ್ಚೆ ಮಾಡುವುದು ಉತ್ತಮ.

★ ಆಹಾರ– ವಿಹಾರಗಳ ಬಗೆಗಿನ ಆದ್ಯತೆಗಳು ಪರಸ್ಪರರಿಗೆ ತಿಳಿದಿರಬೇಕು. ಮನೆಗೆಲಸಗಳನ್ನು ಹಂಚಿಕೊಳ್ಳುವುದು ಹೇಗೆ, ಪ್ರತಿಯೊಬ್ಬರ ಜವಾಬ್ದಾರಿಗಳೇನು ಎನ್ನುವುದರ ಸ್ಪಷ್ಟತೆ ಇಬ್ಬರೂ ದುಡಿಯುವ ಕುಟುಂಬಗಳಲ್ಲಿ ಪ್ರಮುಖವಾಗುತ್ತದೆ. ಪತ್ನಿ ಮನೆವಾರ್ತೆಯಲ್ಲಿ ಇರುವವಳಾದರೂ ಅವಳು ನಿರೀಕ್ಷಿಸುವ ಸಹಾಯದ ಬಗೆಗೆ ಹೇಳಿಕೊಳ್ಳಲೇಬೇಕು.

★ ಲೈಂಗಿಕತೆಯ ಬಗೆಗೆ ಪರಸ್ಪರರ ರುಚಿ, ಕನಸು, ಕಲ್ಪನೆಗಳ ಬಗೆಗೆ ಮಾತನಾಡುವುದು ಸಾಧ್ಯವಾದರೆ ಅದು ಅತ್ಯುತ್ತಮ ಬೆಳವಣಿಗೆಯಾಗುತ್ತದೆ. ಆದರೆ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದು ಪೋಷಕರಿಂದ ವ್ಯವಸ್ಥೆಯಾದ ಸಂಬಂಧಗಳಲ್ಲಿ ಲೈಂಗಿಕತೆಯ ವಿಚಾರಗಳನ್ನು ಚರ್ಚಿಸುವುದು ಕಷ್ಟವಾಗಬಹುದು. ಹಾಗಾಗಿ ಕಡೆಯ ಪಕ್ಷ ಮಕ್ಕಳನ್ನು ಪಡೆಯುವ ಬಗೆಗಿನ ತಮ್ಮ ಯೋಚನೆಗಳನ್ನಾದರೂ ಚರ್ಚಿಸಲೇಬೇಕು.

★ ಭಾವೀ ಸಂಗಾತಿಗಳು ತಮ್ಮ ಕೌಟುಂಬಿಕ ಹಿನ್ನೆಲೆಯ ಬಗೆಗೆ ಎಲ್ಲಾ ಮಾಹಿತಿಗಳನ್ನು ಹಂಚಿಕೊಳ್ಳುವುದು ಒಳಿತು. ಅಗತ್ಯವೆನ್ನಿಸಿದರೆ ಇಬ್ಬರೂ ಸಂಪೂರ್ಣ ದೈಹಿಕ ಪರೀಕ್ಷೆಯನ್ನು ಮಾಡಿಸಿಕೊಂಡು ಅನಗತ್ಯ ಅನುಮಾನಗಳನ್ನು ದೂರಮಾಡಬಹುದು.

★ ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನೂ ಇಬ್ಬರೂ ಸೇರಿಯೇ